


## ಓರ್ಫೋನ್‌ಪ್ಲೇ

ಆನ್‌ಲೈನ್‌ನಲ್ಲಿ ಗೇಮ್ ಇಷ್ಟಪಡುವವರಿಗಾಗಿ ಈ ಅದ್ಭುತ ಆ್ಯಪ್ ಬಿಡುಗಡೆಯಾಗಿದ್ದು, ಉಚಿತ ಗೇಮ್‌ಗಳ ದೊಡ್ಡ ಸಂಗ್ರಹವೇ ಇಲ್ಲಿದೆ. ಆಟ ಆಡುವುದಲ್ಲದೇ ನಗದು ಬಹುಮಾನಗಳನ್ನೂ ಪಡೆಯಬಹುದು. ಇದರಲ್ಲಿ ಪದಬಂಧ, ಬುದ್ಧಿಗೆ ಕಸರತ್ತು ನೀಡುವಂತಹ ಗೇಮ್‌ಗಳಿದ್ದು, ಸಾಹಸ ಕಥೆಗಳನ್ನು ಹೇಳುವಂತಹ ಗೇಮ್‌ಗಳೂ ಇವೆ. ಇವೆಲ್ಲವೂ ಒಂದೇ ಕಡೆ ಲಭ್ಯವಿದ್ದು, ಬೇರೆ ಬೇರೆ ವೆಬ್‌ಸೈಟ್‌ಗಳನ್ನು ಭೇಟಿ ಮಾಡಿ ಡೌನ್‌ಲೋಡ್ ಮಾಡುವ ಅಗತ್ಯವಿಲ್ಲ. ಟೂರ್ನ್‌ಮೆಂಟ್, ಮಲ್ಟಿಪ್ಲೇಯರ್ ಫ್ರೆಂಡ್ಸ್ ಹಾಗೂ ಒನ್ ಟು ಒನ್ ಎಂಬ ಸ್ಪರ್ಧಾ ವಿಭಾಗಗಳಿದ್ದು, ಸ್ನೇಹಿತರ ಜೊತೆ ಸ್ಪರ್ಧೆಗಿಳಿಯಬಹುದು. ಈ ಆಟಗಳ ಫಲಿತಾಂಶವನ್ನು ಸಾಮಾಜಿಕ ಜಾಲತಾಣಗಳಲ್ಲೂ ಹಂಚಿಕೊಳ್ಳಬಹುದು. ನಗದನ್ನು ನಿಮ್ಮ ಓರ್ಫೋನ್ ಖಾತೆಗೆ ಸೇರಿಸಲಾಗುವುದು. ಇದನ್ನು ಪೇಪಾಲ್ ಅಥವಾ ಕ್ರೆಡಿಟ್ ಕಾರ್ಡ್ ಮೂಲಕ ಹಿಂಪಡೆಯಬಹುದು. ಈ ಆ್ಯಪ್ ಐಟ್ಯೂನ್ ಸ್ಟೋರ್‌ನಲ್ಲಿ ಲಭ್ಯ.

## ಕ್ಯುಟೋಕ್



ಯಾವುದೇ ಭಾಷೆಯ ತಡೆಗೋಡೆಯಿಲ್ಲದೇ ಇತರರ ಜೊತೆ ಸಂವಹನ ನಡೆಸಲು ಬಳಸುವಂತಹ ಭಾಷಾಂತರ ಆ್ಯಪ್ ಇದಾಗಿದ್ದು, ಆ್ಯಂಡ್ರಾಯ್ಡ್ ಪ್ಲೇಸ್ಟೋರ್ ಹಾಗೂ ಆ್ಯಪ್‌ಸ್ಟೋರ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಇದು ಒಟ್ಟು 556 ಮಂದಿ ವೃತ್ತಿಪರ ಭಾಷಾಂತರಕಾರರನ್ನು ಹೊಂದಿದೆ. ಅವರು ಇಂಗ್ಲಿಷ್‌ನಿಂದ ಒಟ್ಟು 61 ಭಾಷೆಗಳಿಗೆ ಭಾಷಾಂತರ ಮಾಡಬಲ್ಲರು. ಇಲ್ಲಿ ಜನರೇ ಭಾಷಾಂತರ ಮಾಡುವುದರಿಂದ ಮಾತನಾಡುವ ಸಂದರ್ಭ, ಧ್ವನಿಯ ಏರಿಳಿತ ಎಲ್ಲವೂ ಕರಾರುವಾಕ್ಕಾಗಿರುತ್ತದೆ. ವೈದ್ಯಕೀಯ, ಕಾನೂನು ಸಮಸ್ಯೆಯಂತಹ ತುರ್ತು ಸಂದರ್ಭಗಳಲ್ಲಿ ಇದು ಬಳಕೆದಾರರ ನೆರವಿಗೆ ಬರುತ್ತದೆ. ವಿದೇಶಗಳಲ್ಲಿ ಪ್ರವಾಸ ಮಾಡುವವರಿಗೆ ಸ್ಥಳೀಯ ಭಾಷೆಯಲ್ಲಿ ಸಂವಹನ ನಡೆಸಲು ನೆರವಾಗುತ್ತದೆ. ಉದಾಹರಣೆಗೆ ಜರ್ಮನಿ, ಫ್ರೆಂಚ್, ಇಟಾಲಿಯನ್, ಸ್ಪ್ಯಾನಿಷ್, ಮ್ಯಾಂಡ್ರೇನ್ ಮೊದಲಾದ ಭಾಷೆಗಳಿಗೆ ಇಂಗ್ಲಿಷ್ ಅನ್ನು ಭಾಷಾಂತರ ಮಾಡುತ್ತದೆ. ಇದಕ್ಕಾಗಿ ಭಾಷಾಂತರಕಾರರಿಗೆ ಸೇವಾ ಶುಲ್ಕ ನೀಡಬೇಕಾಗುತ್ತದೆ.

## ಅಕಿಯಾಕಮಿ ಕ್ವೆಸ್ಟ್

ಯಾವುದೇ ಕಂಪೆನಿಯಲ್ಲಿ ಪ್ರಾಜೆಕ್ಟ್ ಅನ್ನು ಯಶಸ್ವಿಗೊಳಿಸಲು ತಂಡದ ಸದಸ್ಯರ ಮಧ್ಯೆ ಪರಸ್ಪರ ಹೊಂದಾಣಿಕೆ ಇರಬೇಕಾಗುತ್ತದೆ. ಇದನ್ನು ಉತ್ತೇಜಿಸಲು ಐಒಎಸ್ ಹಾಗೂ ಆ್ಯಂಡ್ರಾಯ್ಡ್‌ನ ಈ ಆ್ಯಪ್ ನೆರವು ನೀಡುತ್ತದೆ. ಇದು ತಂಡದ ಸದಸ್ಯರನ್ನು ಉತ್ತೇಜಿಸಲು ಗೇಮ್ ಒಂದನ್ನು ರೂಪಿಸಿದೆ. ನಿಮ್ಮ ಸಹೋದ್ಯೋಗಿಗಳ ಮಧ್ಯೆ ಕೌಶಲವನ್ನು ಅಭಿವೃದ್ಧಿಪಡಿಸುವುದರ ಜೊತೆಗೆ ತಮಾಷೆಯನ್ನೂ ಅನುಭವಿಸಲು ಅನುವು ಮಾಡಿಕೊಡುತ್ತದೆ. ಇದು ಗೇಮ್ ಆಗಿದ್ದರೂ ಕೂಡಾ ಪ್ರಾಜೆಕ್ಟ್ ಅಥವಾ ಕಚೇರಿಯ ಕೆಲಸ ಮುಗಿಸಲು ಸೂಕ್ತವಾದ ಸಂವಹನವನ್ನು ಏರ್ಪಡಿಸುತ್ತದೆ. ವಿಶ್ವಾಸವನ್ನು ಮೂಡಿಸುತ್ತದೆ.



## ಕನೆಕ್ಷನ್




ಇದು ಡೇಟಿಂಗ್ ಆ್ಯಪ್ ಆಗಿದ್ದು, ಪೂರ್ಣ ಬಳಕೆದಾರರು ಹಾಗೂ ಮ್ಯಾಚ್ ಮೇಕರ್ ಎಂಬ ಎರಡು ವಿಭಾಗಗಳಿವೆ. ನಿಮ್ಮ ವಾಸಸ್ಥಳದ ಆಧಾರದ ಮೇಲೆ ಅಲ್ಲಿ ಬೇರೆ ಯಾರಾದರೂ ಈ ಆ್ಯಪ್‌ಗೆ ಸೈನಪ್ ಆಗಿದ್ದಾರಾ ಎಂದು ಹುಡುಕಾಡುತ್ತದೆ. ಅವರ ವಿಳಾಸ ಹಾಗೂ ಇತರ ಸಂಪರ್ಕದ ವಿವರಗಳನ್ನು ಪಡೆಯಬಹುದು. ಸಂಗಾತಿ ಬಯಸುವವರು ಈ ಆ್ಯಪ್‌ಗೆ ಉಚಿತ ಸದಸ್ಯತ್ವ ಪಡೆಯಬಹುದು. ನಂತರ ಸೇವಾ ಶುಲ್ಕ ನೀಡಬೇಕಾಗುತ್ತದೆ. ಆರಂಭದಲ್ಲಿ ಚ್ಯಾಟ್ ಮಾಡಬಹುದು. ಆಕರ್ಷಕವಾಗಿ ವಿವರಗಳನ್ನು ಬರೆದುಕೊಂಡ ನಂತರ ಆ್ಯಪ್ ನಿಮ್ಮ ವಿವರಗಳನ್ನು ಪ್ರದರ್ಶಿಸುತ್ತದೆ. ಇದರಲ್ಲೇ ಮೆಸೇಜ್ ವಿಭಾಗವಿದ್ದು, ನಿಮಗೆ ಸಂದೇಶಗಳು ಬರಲಾರಂಭಿಸುತ್ತವೆ.

■ ಎಸ್. ತುಂಬೆ